**2 ನೇ ಅಧಿಕ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ 2 ನೇ ನ್ಯಾಯಾಲಯ, ಗದಗ.**

**C.C.No.650/2024**

ಸಿಡಬ್ಲ್ಯೂ: 01 ಪಿಡಬ್ಲ್ಯು : 01

ದಿನಾಂಕ: 24.11.2025

ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

ಸಾಕ್ಷಿದಾರರ ಹೆಸರು - ಶ್ರೀ ಮಹಾದೇವಪ್ಪ ವೀರಬಸಪ್ಪ ಮೇವುಂಡಿ

ವಯಸ್ಸು - 42 ವರ್ಷಗಳು

ಉದ್ಯೋಗ - ಕೂಲಿ

ವಾಸ ಸ್ಥಳ - **ಕಣಗಿನಹಾಳ, ಗದಗ**

**ಮುಖ್ಯ ವಿಚಾರಣೆ ಮಾನ್ಯ ಸ.ಸ.ಅ. ರವರಿಂದ:**

ದಿ: 03-07-2024 ರಂದು ಕಣಗಿನಹಾಳ ಗ್ರಾಮದಿಂದ ಗದಗಕ್ಕೆ ಕೆಲಸಕ್ಕೆಂದು ಬಂದಿದ್ದೇನು. ಮನೆತನದ ಅಡಚಣೆಗಾಗಿ ತೊಂದರೆ ಇರುವುದರಿಂದ ನನ್ನ ಹೆಂಡತಿಯ ಬಂಗಾರದ ಆಭರಣಗಳನ್ನು ಒತ್ತಿ ಇಟ್ಟು ಹಣ ತಂದರಾಯಿತು ಎಂದು ಆಭರಣಗಳನ್ನು ತೆಗೆದುಕೊಂಡು ರಾತ್ರಿ ಗದಗಕ್ಕೆ ಬರುವ ಕುರಿತು ನನ್ನ ಬೈಕ ತೆಗೆದುಕೊಂಡು ನಮ್ಮ ಊರಿಂದ ಬೆಟಗೇರಿ ಕಡೆಗೆ ಬರುತ್ತಿರುವಾಗ ನಮ್ಮ ಊರಿನ ಯಕ್ಕಿಹಳ್ಳದ ಹತ್ತಿರ ನಾನು ಮೂತ್ರವಿಸರ್ಜನೆ ಮಾಡಲು ಹೋದಾಗ ರಾತ್ರಿ 8-20 ಗಂಟೆಗೆ ಅಲ್ಲಿಗೆ ಒಬ್ಬ ವ್ಯಕ್ತಿ ಖಾಕಿ ಬಣ್ಣದ ಪ್ಯಾಂಟ , ನೀಲಿ ಬಣ್ಣದ ಬೂಟು, ಜಾಕೇಟ ಹಾಕಿಕೊಂಡು ನನಗೆ ಬಂದು ಕಾಲಿನಿಂದ ಒದ್ದಿರುತ್ತಾನೆ. ಇಲ್ಲೆಕೆ ಕುತಿಯೋ ಎಂದು ಬೈದು ನನ್ನ ನನ್ನ ಜೇಬನಲ್ಲಿದ್ದ ಬಂಗಾರದ ಆಭರಣಗಳನ್ನು ಕಸಿದುಕೊಂಡಿರುತ್ತಾನೆ. ನನ್ನ ಜೇಬಿನಲ್ಲಿ ಒಂದು ಮಾಂಗಲ್ಯ ಸರ, ಒಂದು ಚೈನು, ಒಂದು ಲಾಕೇಟ ಇತ್ತು. ನಾನು ಎರಡು ದಿನ ಮನೆಯಲ್ಲಿದ್ದು ನಂತರ ದೂರು ನೀಡಿರುತ್ತೇನೆ. ನಂತರ ಪೊಲೀಸರನ್ನು ನಾನು ಕರೆದುಕೊಂಡು ಗುನ್ಹಾ ಸ್ಥಳವನ್ನು ತೊರಿಸಿರುತ್ತೇನೆ ಅಲ್ಲಿ ಪೊಲೀಸರು ಪಂಚನಾಮೆ ಮಾಡಿರುತ್ತಾರೆ. ನಂತರ ಪೊಲೀಸರು ನನ್ನನ್ನು ಜೈಲಿಗೆ ಕರೆದುಕೊಂಡು ಹೊಗಿರುತ್ತಾರೆ ಅಲ್ಲಿ 5 ಜನರನ್ನು 3 ಬಾರಿ ನಿಲ್ಲಿಸಿ ಗುರುತಿಸಲು ಹೇಳಿದ್ದು ನಾನು ಆರೊಪಿಯನ್ನು ನೊಡಿ ಗುರುತಿಸಿರುತ್ತೇನೆ. ನನ್ನನ್ನು ಜೈಲಿಗೆ ತಹಶೀಲ್ದಾರ ಅವರು

ಕರೆದುಕೊಂಡು ಹೋಗಿರುತ್ತಾರೆ. ಸಾಕ್ಷಿಯು ವಿಸಿ ಮೂಲಕ ಹಾಜರುಪಡಿಸಿದ ಆರೊಪಿಯನ್ನು ನೋಡಿ ಗುರುತಿಸಿರುತ್ತಾರೆ.ಸದರಿ ದಿನ ಅರೋಪಿತನು ಮೊಟಾರಸೈಕಲ ಮೇಲೆ ಬಂದಿರುತ್ತಾನೆ. ನಾನು ನಂಬರಪ್ಲೇಟನ್ನು ನೊಡಿರುವುದಿಲ್ಲ. ದೂರನ್ನು ನಿಪಿ-1, ಸಾಕ್ಷಿ ಸಹಿ ನಿಪಿ-1(ಎ) ಎಂದು, ಪಂಚನಾಮೆಯನ್ನು ನಿಪಿ-2, ಸಾಕ್ಷಿ ಸಹಿ ನಿಪಿ-2(ಎ) ಎಂದು, ಪಂಚನಾಮೆ ಕಾಲಕ್ಕೆ ತೆಗದ ಪೊಟೊ ನಿಪಿ-3 ಮತ್ತು 4 ಎಂದು, ಗುರುತಿನ ಕವಾಯತನ್ನು ನಿಪಿ-5, ಸಾಕ್ಷಿ ಸಹಿ ನಿಪಿ-5(ಎ) ಎಂದು ಗುರುತಿಸಾಲಯಿತು. ಸಾಕ್ಷಿಯು ಮುಮಾ-1 ರಿಂದ 4 ಇರುವ ಪೊಟೊವನ್ನು ನಿಪಿ-6 ಎಂದು ಗುರುತಿಸಲಾಯಿತು. ಸಾಕ್ಷಿಯು ಮೊಟಾರಸೈಕಲ ಪೊಟೊವನ್ನು ನೊಡಿ ಗುರತಿಸಿರುತ್ತಾರೆ.

**<u>ಪಾಟೀ ಸವಾಲುಃ ಶ್ರೀ ಅಯ್ ಎ ಬಿ ಆರೋಪಿತರ ಪರ ವಕೀಲರಿಂದ</u>**

ನಾನು ದೂರನಲ್ಲಿ ನಾನು ಸಾಲ ಮಾಡಿದ್ದರಿಂದ ಬಂಗಾರವನ್ನು ಒತ್ತಿ ಇಡಲು ಹೊಗುತ್ತಿದ್ದೇನೆಂದು ಬರೆಸಿರುವುದಿಲ್ಲ. ನಾನು ನನ್ನ ಹೆಂಡತಿಯ ಅನಾರೋಗ್ಯದ ಕಾರಣದಿಂದ ಬಂಗಾರವನ್ನು ಒತ್ತಿ ಇಡಲು ಹೊಗುತ್ತಿದ್ದೇನು ಎಂದು ಬರೆಸಿರುವುದಿಲ್ಲ. ನಾನು ದೂರನಲ್ಲಿ ಪೊಲೀಸ ಬಟ್ಟೆಗಳನ್ನು ಧರಿಸಿರುತ್ತಾನೆ ಜಾಕೇಟ ಹಾಕಿ ಬಂದಿರುತ್ತಾನೆಂದು ಬರೆಸಿರುತ್ತೇನೆ. ನಾನು ನನ್ನ ದೂರಿನಲ್ಲಿ ಆರೊಪಿತನು ನಾನು ಪೊಲೀಸ ಇರುತ್ತೇನೆಂದು ಹೇಳಿದ ಬಗ್ಗೆ ಬರೆಸಿರುತ್ತೇನೆ. ಆ ದಿನ ವ್ಯಕ್ತಿ ಮುಖಕ್ಕೆ ಮಾಸ್ಕ ಹಾಕಿಕೊಂಡು ಬಂದಿರುತ್ತಾನೆ. ನಾನು ನನ್ನ ದೂರಿನಲ್ಲಿ ಆ ವ್ಯಕ್ತಿಯ ಎತ್ತರ ಹಾಗೂ ಅಗಲದ ಬಗ್ಗೆ ನಮೂದಿಸಿರುವುದಿಲ್ಲ. ಮೊಟಾರಸೈಕಲ ನಂಬರ ಗೊತ್ತಿರುವುದಿಲ್ಲ ಅದು ಯಾ ಕಂಪನಿ ಎಂದು ಗೊತ್ತಿರುವುದಿಲ್ಲ. ನಾನು ದೂರನ್ನು ದಿಃ 03-07-2024 ರಂದು ಕೊಟ್ಟಿರುತ್ತೇನೆ. ನನಗೆ ಪೊಲೀಸರು ನೊಟಿಸ್ಸ ನೀಡಿ ಗುನ್ನಾ ಸ್ಥಳಕ್ಕೆ ಬರಲು ಹೇಳಿರುವುದಿಲ್ಲ. ಸಂಗಮೇಶ ಗಾಣಗೇರ ನನ್ನ ಗೆಳಯನಾಗಬೇಕು. ಲಕ್ಷ್ಮಣ ಕುರ್ತುಕೋಟಿ ನನಗೆ ಪರಿಚಯ ಇರುತ್ತಾರೆ. ಪಂಚರನ್ನು ನಾನೇ ಪೊಲೀಸಠಾಣೆಗೆ ಕರೆದುಕೊಂಡು ಹೊಗಿರುತ್ತೇನೆ. ಪೋಲೀಸರು ನನಗೆ ಹಾಗೂ ಪಂಚರಿಗೆ ನೊಟಿಸ್ಸ ನೀಡಿರುವುದಿಲ್ಲ ಪಂಚರು ಜಾಗವನ್ನು ತೋರಿಸಿ ಪಂಚನಾಮೆ ಬರೆದುಕೊಡುತ್ತೇವೆಂದು ಹೇಳಿರುವುದಿಲ್ಲ. ಪೊಲೀಸರು ನನಗೆ ಜೈಲಿಗೆ ಬರಲು ಯಾವುದೇ ನೊಟಿಸ್ಸ ನೀಡಿರುವುದಿಲ್ಲ. ನಾನು ಜೈಲಿಗೆ ಹೊಗುವಾಗ ಆದಾರ ಕಾರ್ಡ ತೆಗೆದುಕೊಂಡು ಹೋದ ಬಗ್ಗೆ ನೆನಪಿರುವುದಿಲ್ಲ. ತಹಶೀಲ್ದಾರ ಅವರು ನನಗೆ ಗುರುತು ಕವಾಯತ್ ನಿಡಲು ನೊಟಿಸ್ಸ ನೀಡಿರುವುದಿಲ್ಲ.

ಜೈಲಿನಲ್ಲಿ ನಿಲ್ಲಿಸಿದವರ 5 ಜನರ ಹೆಸರು ಹೇಳಲಾಗುವುದಿಲ್ಲ, ಅ ದಿನ 5 ಜನರು ಯಾರ ಬಣ್ಣದ ಬಟ್ಟೆ ಹಾಕಿರುತ್ತಾರೆಂದು ಹೇಳಲು ಆಗುವುದಿಲ್ಲ. ನಾನು ಸಬ್ ಜೈಲನಲ್ಲಿ ಸಹಿ ಮಾಡಿರುತ್ತೇನೆ. ನಾನು ಸಹಿ ಯಾವ ದಿನ ಮಾಡಿರುತ್ತೇನೆಂದು ನೆನಪಿರುವುದಿಲ್ಲ. ಜೈಲಿನಲ್ಲಿ ಪಿಸಿ ಸಹಿ ಮಾಡಿಸಿರುತ್ತಾರೆ ಜೈಲರು ಯಾರು ಎಂದು ಗೊತ್ತಿರುವುದಿಲ್ಲ. ನಾನು ಗುರುತು ಕವಾಯತ್ ಗೆ ಬಂದ ಬಗ್ಗೆ ನನಗೆ ಪ್ರತಿ ಕೊಟ್ಟು ಜೈಲಗೆ ಕೊಟ್ಟ ಬಗ್ಗೆ ಗೊತ್ತಿರುವುದಿಲ್ಲ. ಜೈಲನಲ್ಲಿ 5 ಜನರಿಗೂ ಯಾವುದೇ ಮಾಸ್ಕ ಹಾಕಿರುವುದಿಲ್ಲ. ಗುರುತಿನ ಕವಾಯತ್ ಜೈಲನಲ್ಲಿ ಒಂದೇ ಜಾಗದಲ್ಲಿ ಮಾಡಿರುತ್ತಾರೆ. 1ನೇ ಸಲ ನಾನು ಗುರುತಿಸಿದಾಗ ಅರೊಪಿತನು 3ನೇದವರಾಗಿ ನಿಂತಿದ್ದರು. 2 ಮತ್ತು 3ನೇ ಸಲ ನಾನು ಗುರುತಿಸಿದಾಗ ಅರೊಪಿತನು ಎಲ್ಲಿ ನಿಂತಿದ್ದನು ಎಂದು ಹೇಳಲಾಗುವುದಿಲ್ಲ. ನಾನು ಪೊಲೀಸರಿಗೆ ದೂರಿನಲ್ಲಿ ಆ ವ್ಯಕ್ತಿ ಸದರಿ ದಿನ ಮಾಸ್ಕ ಧರಿಸಿದ್ದರು ಎಂದು ಹೇಳಿರುತ್ತೇನೆ. ಆ ದಿನ ಘಟನೆ ನಡೆದ ದಿನ ರಾತ್ರಿ ಕತ್ತಲು ಇತ್ತು. ನಾನು ನನ್ನ ದೂರಿನಲ್ಲಿ ಘಟನ ಸ್ಥಳದಲ್ಲಿ ಲೈಟಿನ ಕಂಬ ಇದು ಅಲ್ಲಿ ಬೆಳಕು ಇತ್ತು ಎಂದು ಬರೆಸಿರುವುದಿಲ್ಲ. ಆ ನಾನು ಬೆಳಕಿನಲ್ಲಿ ಆ ವ್ಯಕ್ತಿಯನ್ನು ನೊಡಿರುತ್ತೇನೆಂದು ದೂರಿನಲ್ಲಿ ಬರೆಸಿರುವುದಿಲ್ಲ. ನಾನು ಆ ವ್ಯಕ್ತಿಯನ್ನು 20 ನಿಮಿಷಗಳವರೆಗೆ ನೊಡಿರುತ್ತೇನೆ. ನಾನು ದೂರನಲ್ಲಿ ಆರೊಪಿಯ ಚಹಾರ ಪಟ್ಟಿಯನ್ನು ಹೇಳಿರುವುದಿಲ್ಲ. ನಾನು ನನಗೆ ಒಳಪೆಟ್ಟಾಗಿದೆ ಎಂದು ಪೊಲೀಸರಿಗೆ ಹೇಳಿರುತ್ತೇನೆ ಅವರು ಅಸ್ಪತ್ರೆಗೆ ಕರೆದುಕೊಂಡು ಹೊಗಿ ಚಿಕಿತ್ಸೆ ಕೊಡಿಸಿರುವುದಿಲ್ಲ. ನಾನು ಆಸ್ಪತ್ರೆಗೆ ಚಿಕಿತ್ಸೆ ಪಡೆದುಕೊಂಡ ಯಾವುದೇ ದಾಖಲೆ ನೀಡಿರುವುದಿಲ್ಲ. ನಾನು ಪೊಲೀಸರಿಗೆ ಚಿಕಿತ್ಸೆ ಪಡೆದುಕೊಂಡ ಬಗ್ಗೆ ದಾಖಲೆಯನ್ನು ಕೊಟ್ಟಿರುವುದಿಲ್ಲ. ನಾನು ದೂರನ್ನು ಕೊಡುವುದನ್ನು ಬಿಟ್ಟು ಮತ್ತೆ ಪೊಲೀಸಠಾಣೆಗೆ ಹೊಗಿರುವುದಿಲ್ಲ. ಘಟನಾ ಸ್ಥಳದಲ್ಲಿ ಸಾಕಷ್ಟು ಜನರ ಓಡಾಟ ಇರುತ್ತದಂದರೆ ಸರಿ. ನಾನು ಘಟನೆಯಾದಾಗ ಚಿರಾಡಿ ಜನರನ್ನುಕರೆಯುವ ಪ್ರಯತ್ನ ಮಾಡಿರುವುದಿಲ್ಲ. ನಾನು ಬಂಗಾರದ ಆಭರಣಗಳ ರಶೀಧಿ ಹಾಗೂ ಪೊಟೊ ಕೊಟ್ಟಿರುವುದಿಲ್ಲ. ಪೊಲೀಸರು ಮುಮಾ ಹಾಗೂ ಬೇರೆ ಬಂಗಾರವನ್ನು ಇಟ್ಟು ನನಗೆ ಗುರುತಿಸಲು ಹೇಳಿರುವುದಿಲ್ಲ. ನಾನು ಆ ದಿನ ಬಂಗಾರವನ್ನು ಒತ್ತಿ ಇಡಲು ಗದಗಗೆ ಬರುತ್ತಿದ್ದೇನು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಬೆಟಗೇರಿಯ ಎಕ್ಕಿಹಳ್ಳದ ಹತ್ತಿರ ಬಂದಾಗ ಅಲ್ಲಿ ಒಬ್ಬ ವ್ಯಕ್ತಿ ಖಾಕಿ

ಬಣ್ಣದ ಪ್ಯಾಂಟ ಹಾಗೂ ಜಾಕೇಟ ಹಾಕಿಕೊಂಡು ಬಂದು ನನಗೆ ಕಾಲಿನಿಂದ ಒದ್ದಿರುತ್ತೇನೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.ನನ್ನ ಜೇಬಿನಲ್ಲಿದ್ದ ಬಂಗಾರದ ಆಭರಣಗಳನ್ನು ಕಸಿದುಕೊಂಡಿರುತ್ತಾನೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಘಟನಾ ಜಾಗವನ್ನು ಘಟನೆಯಾದ 4-5 ದಿನಗಳ ನಂತರ ತೊರಿಸಿರುತ್ತೇನೆ. ಆ ಸಮಯದಲ್ಲಿ ಚಾಸಾ-2 ಮತ್ತು 3 ರವರು ಹಾಜರಿದ್ದು ಪೊಲೀಸರು ಪಂಚನಾಮೆ ಮಾಡಿರುತ್ತಾರೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪೊಲೀಸರು ನನ್ನನ್ನು ಜೈಲಿಗೆ ಕರೆದುಕೊಂಡು ಗುರುತಿನಕವಾಯತ್ ಮಾಡಿರುತ್ತಾರೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.ಆರೊಪಿಗೂ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಪೊಲೀಸರ ಮಾತನ್ನು ಕೇಳಿ ಕಳ್ಳತನ ಮಾಡಿದ ವ್ಯಕ್ತಿ ಬೇರೆ ನಾನು ಪೊಲೀಸರ ಮಾತನ್ನು ಕೇಳಿ ಅದೇ ವ್ಯಕ್ತಿ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪಂಚನಾಮೆ ಕಾಲಕ್ಕೆ ಪೊಟೊ ತೆಗೆದಿರುತ್ತೇನೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ. ಸರಿ ಅದೆ.

ಜೆ.ಎಮ್.ಎಫ್.ಸಿ-2, ಗದಗ.